ಗದಗ ನಗರದಲ್ಲಿ ಸರ್ಕಾರದ ವತಿಯಿಂದ ಕಟ್ಟಿದ ಮನೆಗಳ ಬಗ್ಗೆ

೯೫ (೧೧೨) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಪಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗದಗ ನಗರದಲ್ಲಿ ಸರ್ಕಾರದ ವತಿಯಿಂದ ಕಟ್ಟಿದ ಮನೆಗಳು ಎಷ್ಟು. ಹಾಗೂ ಅವುಗಳು ವಿತರಣೆಯಾಗದೆ. ಎಂದಿನಿಂದ ಹಾಗೆ ಉಳಿದಿವೆ, ಈಗ ಅಲ್ಲಿರುವ ಮನೆಗಳಲ್ಲಿ ಅನೇಕ ಮನೆಗಳು ಶಿಥಿಲಗೊಂಡು ಬಿದ್ದು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಗೃಹ ವಿತರಣೆಯಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು? ಹಾಗೂ ಹೊಸ ಮನೆಗಳ ನಿರ್ಮಾಣ ಕಾರ್ಯ ಕೈಗೊಳ್ಳದಿರಲು ಕಾರಣ ಏನು?

ಶ್ರೀ ಅಬ್ದುಲ್ ನಜೀರ್ ಸಾಬ್, (ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಸತಿ ಮಂತ್ರಿಗಳು).—

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ವತಿಯಿಂದ ೧೦೧೦ ಮನೆಗಳನ್ನು ಕಟ್ಟಲಾಗಿದೆ. ಎಲ್ಲಾ ಮನೆಗಳು ವಿತರಣೆಯಾಗಿವೆ. ಮನೆಗಳು ಶಿಥಿಲಗೂಂಡು ಬಿದ್ದು ಹೋಗಿರುವುದಿಲ್ಲ. ಭಾಗ್ಯ ಮಂದಿರ ಯೋಜನೆಯಡಿಯಲ್ಲಿ ೨೩೮ ಮನೆಗಳನ್ನು ಕಟ್ಟಲಾಗಿದೆ. ಫಲಾನುಭವಿಗಳಿಗೆ ಒಳ್ಳೆಯ ಪರಿಸ್ಥಿತಿಯಲ್ಲಿಯೇ ಈ ಮನೆಗಳೆಲ್ಲವನ್ನೂ ವಿತರಣೆ ಮಾಡಲಾಗಿದೆ. ತದನಂತರ ೬ ಮನೆಗಳು ರಿಪೇರಿ, ಆಗ ಬೇಕಾಗಿದ್ದು ಆದರಲ್ಲಿ ೫ ಮನೆಗಳು ರಿಪೇರಿಯಾಗಿವೆ. ೧ ಮನೆ ರಿಪೇರಿಯ ಹಂತದಲ್ಲಿದೆ.

ಆ) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಗೃಹ ವಿತರಣೆ ಮಾಡಲು ವಿಳಂಬ ಮಾಡಿಲ್ಲ. ಹೊಸ ಮನೆಗಳ ನಿರ್ಮಾಣ ಕಾರ್ಯ ತೆಗೆದು ಕೊಳ್ಳಲು ಯೋಗ್ಯವಾದ ಸ್ಥಳ ಲಭ್ಯವಿಲ್ಲದ ಕಾರಣ ಮಂದಿನ ಯೋಜನೆ ತೆಗೆದುಕೊಳ್ಳಲಾಗಲಿಲ್ಲಾ.

೧೯೭೯-೮೦ ರಿಂದ ೧೯೮೬-೮೭ ರ ವರೆಗೆ ೨೮೫ ಮನೆಗಳನ್ನು ಭಾಗ್ಯಮಂದಿರ ಯೋಜನೆಯಡಿಯಲ್ಲಿ ಮಂಜೂರು ಮಾಡಲಾಗಿದೆ. ಆದರಲ್ಲಿ ೨೩೦ ಮನೆಗಳನ್ನು ಈಗಾಗಲೇ ಕಟ್ಟಿ ವಿತರಣೆ ಮಾಡಲಾಗಿದೆ. ೨೫ ಮನೆಗಳು ನಿರ್ಮಾಣ ಹಂತದಲ್ಲಿವೆ. ಉಳಿದ ೩೦ ಮನೆಗಳ ಬಗ್ಗೆ ಫಲಾನುಭವಿಗಳ ಆಯ್ಕೆ ಆದ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಬ್ಯಾಡಗಿ ಪುರಸಭೆಗೆ ಮಂಜೂರಾಗಿದ್ದ ೨೦ ಮನೆಗಳನ್ನು ವಾಪಸ್ ತೆಗೆದುಕೊಂಡು ಗದಗ ನಗರದಲ್ಲಿ ಕಟ್ಟಲು ಯೋಜಿಸಲಾಗಿದೆ. ಈ ಮನೆಗಳನ್ನು ಬ್ಯಾಡಗಿ ಪುರಸಭೆಯಿಂದ ಹಣ ಪಡೆದ ನಂತರ ಕಟ್ಟಲು ಪ್ರಾರಂಭಿಸಲಾಗುವುದು.

ಬೆಂಗಳೂರು ನಗರದಲ್ಲಿ ಹೆಚ್ಚಿರುವ ಜನಸಂಖ್ಯೆಗೆ ಸೌಕರ್ಯಗಳನ್ನು ಒದಗಿಸುವ ಬಗ್ಗೆ

೯೬ (೩೧೭) ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಪಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಬೆಂಗಳೂರು ನಗರದಲ್ಲಿ ೨೦೦೦ರ ಇಸವಿಯ ವೇಳೆಗೆ ಹೆಚ್ಚಳವಾಗುವ ಜನಸಂಖ್ಯೆಗೆ ಅನುಗುಣವಾಗಿ ಅವರಿಗೆ ಶುಚಿಯಾದ ನೀರು, ವಸತಿ ಮತ್ತು ಇತರೇ ಸೌಕರ್ಯಗಳ ಬಗ್ಗೆ ಸರ್ಕಾರದವರ ಮುಂದೆ ಯೋಜನೆ ಏನಾದರೂ ಇದೆಯೇ? ಹಾಗಿದ್ದಲ್ಲಿ ಅವರ ಮುಖ್ಯಾಂಶಗಳೇನು?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಸಂಸದೀಯ ವ್ಯವಹಾರ ಮತ್ತು ಆಹಾರ ಸಚಿವರು):—

ಸರ್ಕಾರವು ಈ ಬಗ್ಗೆ ಸಲಹೆ ಸೂಚನೆಗಳನ್ನು ಕೊಡಲು ಖ್ಯಾತ ಶಿಲ್ಪತಜ್ಞ ಡಾ। ಚಾರ್ಲ್ಸ್ ಕೋರಿರಾ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಅದು ಸಧ್ಯದಲ್ಲಿ ಒಂದು ಮಧ್ಯಕಾಲಿನ ವರದಿಯನ್ನು ಕೊಡುವವರಿದ್ದಾರೆ. ವರದಿಯನ್ನು ಪರಿಶೀಲಿಸಿದ ನಂತರ ಸರ್ಕಾರವು ಸೂಕ್ತ ಕ್ರಮವನ್ನು ಕೈಗೊಳ್ಳುತ್ತದೆ.